# Songs for classes I –VII (August –October)

## Classes – 1 & 2

೧. ಅಮ್ಮ ಅಮ್ಮ ಅಮ್ಮ ನನ್ನ ತೊಳಿಗೆ ರೆಕ್ಕೆ ಹಚ್ಚು

೨. ಪಾಹಿ ಪಾಹಿ ಗಜಾನನ ಪಾಹಿ ಪಾಹಿ ಗಜಾನನ।

## Class - 3

1. ಕರ್ತಾ ಕೃಷ್ಣಯ್ಯ ನೀ ಬಾರಯ್ಯ
2. ಮುದ್ದು ತಾರೋ ರಂಗ ಎದ್ದು ಬಾರೋ

## Classes – 4 & 6

1. ಶರಣು ಬೆನಕನೆ ಕನಕ ರೂಪನೆ। ಕಾಮಿನಿ ಸಂಗ ದೂರನೆ
2. ರಾಮ ರಾಮ ಎಂಬೆರೆಡಕ್ಷರ ಪ್ರೇಮದಿ ಸಲಹಿತು ಸುಜನರನು

## Class _ 7

1. ಬ್ರಹ್ಮಾನಂದದ ಸಭೆಯೊಳಗಲ್ಲಿ ಸುಮ್ಮನೆ ಇರುತಿಹುದೇನಯ್ಯ
2. ಗೋಪ ಬಾಲನೆ । ಬಹುಗುಣ ಶೀಲನೆ।

## ಹಾಡು–೧

ಗೋಪ ಬಾಲನೆ । ಬಹುಗುಣ ಶೀಲನೆ।

ಗೋವುಗಳಪಾಲನೆ। ನೋಡುವೆ ಬಾ ಬಾ ಬಾ ॥ಪ॥

ಗೋಪರೂಪನೆ ಶಾಪ ದೂರನೆ ನೀಪದೊಳಗೆ ಕೂತು।ಗೋಪೇರಿಗೊಸ್ತ್ರವ

ಶ್ರೀಪತಿ ನೀಡಿದಿ ಬಾಬಾಬಾ ॥೧॥

ಸಿಂಧುಮಂದಿರ ಸುಂದರಾಂಬರ ಮಂದಹಾಸವ ಮಾಡುತ। ವೃಂದಾರುಗಳ

ಮಹಾನಂದದಿ ನೋಡುವಿ ಬಾ ಬಾ ಬಾ ॥೨॥

ದೋಷದೂರನೆ ವಾಸುದೇವನೆ ಶೇಷಗಿರಿಯಲಿ ನಿಂತು। ದಾಸಜನರ

ಇಂದಿರೇಶನೆ ಕಾಯುವಿ ಬಾ ಬಾ ಬಾ ॥೩॥

## ಹಾಡು –೨

ರಾಮ ರಾಮ ಎಂಬೆರೆಡಕ್ಷರ ಪ್ರೇಮದಿ ಸಲಹಿತು ಸುಜನರನು ॥ಪ॥
ಹಾಲಾಹಲವನ್ನೇ ಪಾನವ ಮಾಡಿದ ।ಫಾಲಲೋಚನನೆ ಬಲ್ಲವನು।
ಆಲಾಪಿಸುತ ಶಿಲೆಯಾಗಿದ್ದ ಬಾಲೆ ಅಹಲ್ಯೆಯ ಕೇಳೇನು ॥೧॥
ಅಂಜಿಕೆ ಇಲ್ಲದೆ ಗಿರಿ ಸಾರಿದ ಕಪಿ ಕುಂಜರ ರವಿಸುತ ಬಲ್ಲವನು
ಎಂಜಲಫಲಗಳ ಹರಿಗರ್ಪಿಸಿದ ।ಕಂಜಲೋಚನೆಯ ಕೇಳೇನು ॥೨॥
ಕಾಲವನರಿತು ಸೇವೆಯ ಮಾಡಿದ ।ಲೋಲ ಲಕ್ಷ್ಮಣನೇ ಬಲ್ಲವನು।
ವ್ಯಾಳ ಶಯನ ಶ್ರೀ ವಿಜಯವಿಠ್ಠಲನ ಲೀಲೆ ಶರಧಿಯ ಕೇಳೇನು ॥೩॥

## ಹಾಡು–೩

ಮುದ್ದು ತಾರೋ ರಂಗ ಎದ್ದು ಬಾರೋ ॥ಪ॥
ಅಂದವಾದ ಕರ್ಪೂರದ ಕರಡಿಗೆಯ ಬಾಯೊಳೊಮ್ಮೆ ॥ಪ॥
ವಿಷವನುಣಿಸಲು ಬಂದ ಅಸುರೆ ಪೂತನಿಯ ಕೊಂದೆ।
ವಶವಲ್ಲವೋ ಮಗನೇ ನಿನ್ನ ವಿಷವನುಂಡ ಬಾಯೊಳೊಮ್ಮೆ ॥೧॥
ಕಡೆವ ಸಮಯದಿ ಬಂದು ಕಡೆವ ಸತಿಯ ಕೈಯಪಿಡಿದೆ।
ಕಡೆದ ಬೆಣ್ಣೆ ಮೊಸರನೆಲ್ಲ ಒಡನೆ ಮೆದ್ದ ಬಾಯೊಳೊಮ್ಮೆ ॥೨॥
ತೊರವೆಯ ನಾರಸಿಂಹ ವರದಪುರಂದರವಿಠಲ।
ಹರವಿ ಹಾಲನೆಲ್ಲಾ ಕುಡಿದ ನೊರೆಹಾಲಿನ ಬಾಯೊಳೊಮ್ಮೆ ॥೩॥

## ಹಾಡು–೪

ಡೀ ಡೀ ಆಡ್ಯಾನೇ ರಂಗ ಡೀ ಡೀ ಆಡ್ಯಾನೇ।
ಓಡಿ ಓಡಿ ಬಂದು ಹಣೆಗೆ ನೀಡಿ ನೀಡಿ ಢಿಢಿಕ್ ಢಿಢಿಕ್ ಢಿಢಿಕ್ ಎಂದು ॥ಪ॥
ಮರಕತ ನವರತ್ನವಜ್ರ ಹರಳು ಕೆತ್ತಿಸಿದ ದ್ಯುಮಣಿ।
ಕಿರಣ ಮುಕುಟ ಧರಿಸಿದ ಶಿರದಲ್ಲಿ ಸರಿ ಸರಿ ಸರಿ ಸರಿ ಸರಿದಾಡುತ್ತ ॥೧॥
ಚಂದ್ರಶೇಖರ ಹಂಸವಾಹನ ಇಂದ್ರಾದ್ಯರಾಕಾಶದಲ್ಲಿ।
ಧುಂಧುಂ ಧುಂಧುಂ ಧುಂಧುಭಿ ನುಡಿಸೇ ಬಂದೇ ಇಕೋ ಬಂದೇ ಬಂದೆನುತಾ ॥೨॥
ಹಿಂತಿರುಗಿ ಪೋಗಿ ನೀವು ಅಂತರಿಸಿ ದೂರದಲ್ಲಿ ।
ಇಂತು ವಿಜಯವಿಠ್ಠಲರಾಯನು ಹಿಂತಿರಿರಿರಿರಿರಿರಿ ರಿರಿರಿರಿ ಎಂದು ॥೩॥

## ಹಾಡು – ೫

ಪಾಹಿ ಪಾಹಿ ಗಜಾನನ ಪಾಹಿ ಪಾಹಿ ಗಜಾನನ।

ಪಾರ್ವತಿ ಪುತ್ರ ಗಜಾನನ ॥ಪ॥

ಮೂಷಿಕವಾಹನ ಗಜಾನನ। ಮೋದಕ ಹಸ್ತ ಗಜಾನನ ॥೧॥

.ವಾಮನರೂಪ ಗಜಾನನ। ವಿಲಂಬಿತಸೂತ್ರ ಗಜಾನನ ॥೨॥

ವಿಘ್ನವಿನಾಶಕ ಗಜಾನನ। ತವಪಾದ ನಮಸ್ತೆ ಗಜಾನನ ॥೩॥

## ಹಾಡು–೬

ಅಮ್ಮ ಅಮ್ಮ ಅಮ್ಮ ನನ್ನ ತೋಳಿಗೆ ರೆಕ್ಕೆ ಹಚ್ಚು

ನನ್ನ ಸೊಂಟಕೆ ಬೆಳ್ಳಿ ಪಟ್ಟಿ ಕಟ್ಟಿ ಹಕ್ಕಿ ಪುಕ್ಕ ಚುಚ್ಚು

ಹಾರುತ್ತೇನೆ ರೆಕ್ಕೆ ಬಿಚ್ಚಿ ತೆಂಗಿನ ಮರಕೂ ಮೇಲೆ

ಜಗಲಿಯ ಮೇಲೆ ಕುಳಿತೆ ನಮಗೆ ಅಮ್ಮ ಟಾಟಾ ಹೇಳೆ ॥೧॥

ಹಾಗೆ ಹಾಗೆ ಮೇಲೆ ಹೋಗಿ ಮುಟ್ಟುತ್ತೇನೆ ಮೋಡ

ಕೇಳುತ್ತೇನೆ ಯಾರೂ ಕೇಳದ ಚುಕ್ಕಿ ಹಾಡೊ ಹಾಡ ॥೨॥

ತಿಂಗಳೂರಿನ ಅಂಗಳ ಸೇರಿ ಬೆಳ್ಳಿ ಮೊಲವನು ನೋಡಿ

ಹಿಡಿಯುತ್ತೇನೆ ಆರು ಬಣ್ಣದ ಜಿಂಕೆ ಹಾಗೆ ಮಾಡಿ ॥೩॥

ಕೊಟ್ಟೇ ಕೊಡುವನು ಚಂದಾಮಾಮ ಕೆನ್ನೆ ತುಂಬಾ ಮುದ್ದು

ಮುದ್ದಿಸಿ ಬೆಟ್ಟದ ತುದಿಗಿಳಿಸುವನು ಯಾರೂ ಇಲ್ಲದ ಹೊತ್ತು ॥೪॥

## ಹಾಡು – ೭

ಕರ್ತಾ ಕೃಷ್ಣಯ್ಯ ನೀ ಬಾರಯ್ಯ ॥ಪ॥

ಎನ್ನಾರ್ತಧ್ವನಿಗೊಲಿದು ನೀ ಬಾರಯ್ಯ ॥ಅ.ಪ॥

ಸುಗುಣದ ಖಣಿಯೆ ನೀ ಬಾರಯ್ಯ।ಎಮ್ಮಘವನೋಡಿಸಲು ನೀ ಬಾರಯ್ಯ।

ಧಗೆ ಏರಿತು ತಾಪ ನೀ ಬಾರಯ್ಯ। ಸದಾ ಮುಗುಳ್ನಗೆಯ ಮಳೆಗರೆಯೆ ನಿ ಬಾರಯ್ಯ ॥೧॥

ವೈರಿವರ್ಗದಿ ನೊಂದೆ ನಿ ಬಾರಯ್ಯ। ಮತ್ತಾರೂ ಗೆಳೆಯರಿಲ್ಲ ನೀ ಬಾರಯ್ಯ।

ಸೇರಿದೆ ನಿನ್ನಯ ಕರುಣೆಗೆ ಬಾರಯ್ಯ। ಒಳ್ಳೆ ದಾರಿಯ ತೋರಲು ನೀ ಬಾರಯ್ಯ ॥೨॥

ವೈರಾಗ್ಯ ಭಾಗ್ಯವ ಕೊಡು ಬಾರಯ್ಯ। ನಾನಾ ರೋಗದ ಭೇಷಜ ನೀ ಬಾರಯ್ಯ।

ಜಾರುತದಾಯು ನೀ ಬಾರಯ್ಯ। ಉದಾರ ಪ್ರಸನ್ವೇಂಕಟ ನೀ ಬಾರಯ್ಯ ॥೩॥

## ಹಾಡು–೮

ತಾಳು ತಾಳೆಲೊ ರಂಗಯ್ಯ। ನೀ ತಾಳು ತಾಳೆಲೋ ಕೃಷ್ಣಯ್ಯ ॥ಪ॥
ನಾಳೆ ನಮ್ಮನೆಗೆ ಬಂದರೆ ನಿನ್ನ ಕಾಲ ಕಂಭಕೆ ಕಟ್ಟಿ ಹೇಳುವೆ ॥ಅ.ಪ॥
ಚಿಕ್ಕ ಮಕ್ಕಳು ಪೋದರು ಎಂದು ಕಕ್ಕುಲಾತಿಯನು ಮಾಡುವದೇನೊ ರಂಗ
ಸಿಕ್ಕಿದ ಗೋಪಾಲ ಹಿಡಿ ಹಿಡಿ ಎಂದರೆ। ಬಿಕ್ಕಿ ಬಿಕ್ಕಿ ಅತ್ತರೆ ಬಿಡುವರೇನೋ ರಂಗಯ್ಯ ॥೧॥
ದೊರೆಗಳ ಮಗನೆಂಬುವುದೇನೋ ರಂಗ।ದೂರದಿ ಮನೆಯ ಪೊಕ್ಕ ಪರಿಯೇನೋ ರಂಗ।
ದುರುಳ ಬುಧ್ಧಿಯು ನಿನಗೆ ತರವೇನೋ ರಂಗ। ತಿರಿದು ಬೇಡುಂಡದ್ದು ಮರೆತೆಯೇನೋ ರಂಗಯ್ಯ॥೨॥
ಕಟ್ಟಿದ ಆಕಳ ಮೊಲೆಯುಂಡು ಕರು ಬಿಟ್ಟುಹೋಗುವುದೇನೋ ರಂಗ
ಸೃಷ್ಟಿಗೊಡೆಯ ಸಿರಿ ಪುರಂದರ ವಿಠಲನೆ ಇಟ್ಟಿಗೆಯ ಮೇಲೆ ನಿಂತ ಕಾರಣವೇನೋ ರಂಗಯ್ಯ ॥೩॥

## ಹಾಡು–೯

ಶರಣು ಬೆನಕನೆ ಕನಕ ರೂಪನೆ। ಕಾಮಿನಿ ಸಂಗ ದೂರನೆ ॥ಪ॥
ಶರಣು ಸಾಂಬನ ಪ್ರೀತಿಪುತ್ರನೆ ಶರಣು ಜನರಿಗೆ ಮಿತ್ರನೇ॥ಅ.ಪ॥
ಏಕದಂತನೆ ಲೋಕಖ್ಯಾತನೆ। ಏಕ ವಾಕ್ಯ ಪ್ರವೀಣನೇ।
ಏಕವಿಂಶತಿ ಪತ್ರಪೂಜಿತ ಅನೇಕ ವಿಘ್ನವಿನಾಯಕ ॥೧॥
ವಕ್ರತುಂಡನೆ ಮಹಾಕಾಯನೆ ಅರ್ಕಕೋಟಿ ಪ್ರದೀಪನೆ।
ಚಕ್ರ ಧರಹರ ಬ್ರಹ್ಮಪೂಜಿತ ರಕ್ತ ವಸ್ತ್ರಧಾರನೆ ॥೨॥
ಮೂಷಿಕಾಸನ ಶೇಷಭೂಷಣ ಅಶೇಷ ವಿಘ್ನವಿನಾಯಕ ।
ದಾಸ ಪುರಂದರ ವಿಠ್ಠಲೇಶನ ಈಶಗುಣಗಳ ಪೊಗಳುವೆ ॥೩॥

## ಹಾಡು–೧೦

ಬ್ರಹ್ಮಾನಂದದ ಸಭೆಯೊಳಗಲ್ಲಿ ಸುಮ್ಮನೆ ಇರುತಿಹುದೇನಯ್ಯ

ಸುಮ್ಮನೆ ಇರುತಿಹುದೇನಯ್ಯ ॥ಪ॥

ಮಾಡದು ಉಣ್ಣದು ಕೂಡದು ಮಾಣದು

ಕಾಡದು ಬೇಡದು ಕಂಗೆಡದು

ನಾಡಮಾತುಗಳ ಬಲ್ಲದು ಆಡದು

ರೂಢಿಯೊಳಿರುತಿಹುದೇನಯ್ಯ (೨) ॥೧॥

ಪೊಡವಿಗಧಿಕ ನೆಂಬುವರಿಗೆ ಬಲ್ಲದು

ಕಡೆಮೊದಲಿಲ್ಲದ ಪೊಡಲಿಹುದು

ಬೆಡಗನರಿವೆನೆಂಬವರಿಗೆಯಗೋಚರ

ಪೊಡವಿಯೊಳಗಣ ಭಕ್ತರಬಲ್ಲದು (೨) ॥೨॥

ನಿಲ್ಲದು ನಿಲುಕದು ಎಲ್ಲಿಗೆ ಪೋಗದು

ಬಲ್ಲೆನೆಂಬುವರಿಗಳವಡದು

ಬಲ್ಲಿದ ನಮ್ಮ ಪುರಂದರ ವಿಠ್ಠಲ

ಗಲ್ಲದೆ ತಿಳಿಯದು ಜಗದೊಳಗೆ

ಅಲ್ಲದೆ ತಿಳಿಯದು ಜಗದೊಳಗೆ (೧) ॥೩॥